436

ಮೈಸೂರ ಗೆಜಿಟ.

ನಂ. 30 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ 1884.

ಬೆಂಗಳೂರು, ಶನಿವಾರ, ಜುಲೈ ತಾ 26, ಸನ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಿಟರಿಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಜೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬೂರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್‌ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್‌ಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷಣಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 8ನೇ ಜುಲೈ 1884.

ನಂ. 68—ಸನ 1871ನೇ ಇಸವಿ Xನೇ ನಂಬರ್ ಯಕ್ಸೈಜ್ ಆಕ್ಟಿನ 46ನೇ ಸೆಕ್ಷನ ಅನುಸರಿಸಿ ಮೈಸೂರು ಸರ್ಕಾರದವರು, ಸ್ಪಿರಿಟ್ ಸಂಬಂಧವಾದ ಮತ್ತು ಉಕ್ಕುವ ಸಾರಾಯಿಗಳು ಮತ್ತು ನಿಷಾ ಉಂಟುಮಾಡುವ ಯಲ್ಲಾ ತರಹೇದ ಪದಾರ್ಥಗಳು ಇವುಗಳನ್ನ ಹಿಡಿದು ಕೊಳ್ಳುವಣ ವ ಇವುಗಳಿಗಾಗಿ ಝಡ್ತಿ ಮಾಡುವಣ ಮತ್ತು ಸದರೀ ಪದಾರ್ಥಗಳು ಸ್ವಾಧೀನದಲ್ಲಿಟ್ಟುಕೊಂಡಿರತಕ್ಕ ಮನುಷ್ಯರುಗಳನ್ನ ದಸ್ತಗೀರಮಾಡುವಣ ಇಂಥಾ ವಿಷಯಗಳನ್ನು ಕುರಿತು, ಸದರೀ ಮೇಲ್ಕಂಡ ಆಕ್ಟಿನಿಂದ ಯಕ್ಸೈಜ್ ಯಾನೆ ಅಬ್ಕಾರಿ ಆಫೀಸರ್‌ಗಳಿಗೆ ಉಂಟುಮಾಡಲ್ಪಟ್ಟ ಯಲ್ಲಾ ಅಧಿಕಾರಗಳೂ, ದಫೇದಾರ ವ ಅದಕ್ಕೆ ಮೇಲ್ಪಟ್ಟ ದರ್ಜೆವುಳ್ಳ ತಮಾಂ ಪೋಲೀಸು ಆಫೀಸರಗಳಿಗೂ, ಶೇಕದಾರ್ ವ ಅದಕ್ಕೆ ಮೇಲ್ಪಟ್ಟ ದರ್ಜೆಯ ತಮಾಂ ರೆವಿನ್ಯೂ ಆಫೀಸರ್‌ಗಳಿಗೂ ಇದರ ದೆಕೆಯಿಂದ ಕೊಡುತ್ತಾರೆ.

ತಾರೀಖು 9ನೇ ಜುಲೈ 1884.

ನಂ. 69—1870ನೇ ಇಸವಿ Xನೇ ಆಕ್ಟಿನ 6ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಇದರಿಂದ ಪ್ರಕಟಿಸುವದೇನಂದರೆ, ಇದರಡಿ ಕಂಡಸ್ಥ್ವೆ ನಂಬರುಗಳು ಸರ್ಕಾರ್ ಕೆಲಸಕ್ಕಾಗಿ ಅಂದರೆ ಬೆಂಗಳೂರು ಪಟ್ಟಣದಲ್ಲಿ ಹೊಸದಾಗಿ ಬಂದು ಆಸ್ಪತ್ರೆ ಕಟ್ಟುವ ಬಗ್ಯೆ ಬೇಕಾಗಿರುತ್ತೆ. ಸದರೀ ಜಮೀನಿನ ನಕ್ಷೆಯು, ಡಿಸ್ಟ್ರಿಕ್ಟು ಆಫೀಸು ಕಟ್ಟಣದಲ್ಲಿರತಕ್ಕ ಟರ್ವ ಮ್ಯುನಿಸಿಪಲ್ ಕಮ್ಮಿಷನ್ ಆಫೀಸಿನಲ್ಲಿ ನೋಡಬಹುದು.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಪಟ್ಟೇದಾರ ಯಾ ಸ್ವಂತಗಾರರ ಹೆಸರು.	ನಂಬರು.	ನಿವರಿಜೆ.	ಬೀಜವರಿ. ಎ.	ಗುಂ.	ಕಂದಾಯ. ರೂ.	ಆ.	ಪೈ.	ಪರಾ.
ಬೆಂಗಳೂರು	ಡಿಟೋ	ಡಿಟೋ	ವೆಂಕಟಸಾಮಿನಾಯಿಕ	104	ಕಂದಾಯದ ಜಮೀನು	0	22	0	12	0	ಸರಕಾರಿ
			ಸಾವಂದಪಟ್ಟಿ ಸಿದ್ದಲಿಂಗಪ್ಪ	0	ಡಿಟೋ	0	19	0	12	0	ಡಿಟೋ
			ದಾನಪ್ಪನ ಸುಬ್ಬಣ್ಣ	0	ಡಿಟೋ	1	11	1	12	0	ಡಿಟೋ
			ಗುರಕಾರ ವೆಂಕಟರಮಣನಾಯಿಕ	0	ಡಿಟೋ	3	8	4	4	0	ಡಿಟೋ
			ಪಟ್ಟೇದಾರಸುಬ್ಬಯ್ಯ, ಹಕ್ಕುದಾರ ವೆಂಕಟಸುಬ್ಬಯ್ಯ	105	ಡಿಟೋ	4	5	5	0	0	ಇನಾಂ
			ಮುನಷೀನಾಗಪ್ಪನವರ ಮಗ ಕೇಪ ಗಿರಿರಾವ್	106 ವ 152	ಡಿಟೋ	8	19	11	0	0	ಡಿಟ್ಟೋ
						0	26	0	12	0	ಸರಕಾರಿ

ತಾರೀಖು 16ನೇ ಜುಲೈ 1884.

ನಂ, 79.—ಹಿಡುವಳಿಯಲ್ಲಿ ಯಿರದೇ ಯಿರತಕ್ಕ ಸರಕಾರದ ಜಮ್ರ್ಗಳೊಳಗಣ ಹುಲ್ಲುಗಾವಲ್ ಹರಾಜ್ ವಿಷಯವನ್ನು ಕುರಿತು ಇದರಡಿಕಂಡ ನಿಬಂಧನೆಗಳು ಅಜವಾಯಿಷೀ ತರೀಕ್ ಮುಂಜಾರ್ಜಿಪಟ್ಟು ಸಕ್ಕಲಜನಗಳ ತಿಳುವಳಿಕೆಯ ಬಗ್ಯೆ ಘಾಯಿಷ್ ಮಾಡಲ್ಪಟ್ಟಿರುತಿವೆ:—

1. ಅಜವಾಯಿಷೀ ತರೀಕ್ ಈ ಸಾಲ್‌ನಲ್ಲಿ ಹುಲ್ಲುಬನ್ನೀ ಹರಾಜುಗಳು ಹಾಕಲ್ಪಡಕೂಡದು.

2. 1882—83 ಮತ್ತು 83—84ನೇ ಇಸವಿಗಳಲ್ಲಿ ಪ್ರತಿ ಗ್ರಾಮದೊಳಗಣ ಸರಾಸರಿ ಹುಲ್ಲುಬನ್ನೀ ಹುಟ್ಟುವಳಿಯನ್ನು ಕರಾರ್ವಾಕಾ ಲೆಕ್ಕಮಾಡಿ ತನ್ಮೂಲಕ ಗೊತ್ತಾದ ಮೊಬಲಗ್ಯೆ ಆ ಗ್ರಾಮದೊಳು ಹಿಡುವಳಿಯಲ್ಲಿಲ್ಲದಿರುವ ಸರ್ಕಾರ್ ಜಮ್ರ್ಗಳಲ್ಲಿ ಮೇಯಿಸುವ ಹಕ್ಕನ್ನು ಸಾಲ್‌ಮಜಕೂರಿಗೆ ಸದರೀ ಗ್ರಾಮ ನಿವಾಸಿಗಳಿಗೆ ಕೊಡತಕ್ಕದ್ದು.

3. ಈ ಪರತಗಳನ್ನು ಅನುಸರಿಸಿ ಗ್ರಾಮಸ್ಥರು ಮೇಯಿಸುವ ಹಕ್ಕನ್ನು ಅಂಗೀಕರಿಸಿದರೆ ಗ್ರಾಮಸ್ಥರೆಲ್ಲರಿಂದ ಕೊಡಲ್ಪಡತಕ್ಕ ಮೊಬಲಗನ್ನು ವಿಶಿಷ್ಟ ಜಮ್ರ್ದಾರರುಗಳೂ ಗ್ರಾಮದ ಇತರ ನಿವಾಸಿಗಳು ಸಹ ತಮ್ಮೊಳು ತಾವೇ ಹಂಚಿಕೊಂಡು ಅಂತಾ ವಿಭಾಗ ಪ್ರಕಾರ ಪ್ರತಿ ಮನುಷ್ಯನೂ ಕೊಡಬೇಕಾದ ಮೊಬಲಗನ್ನು ತೋರಿಸುವ ಬಂದು ಪಟ್ಟಿಯನ್ನು ತಯಾರ್ಮಾಡಿ, ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರೆಲ್ಲರೂ ಸದರೀ ಪಟ್ಟಿಗೆ ರುಜು ಮಾಡಬೇಕಲ್ಲದೆ, ಪಟೇಲ್ ಶನಭೋಗರು ಸಹ ರುಜು ಮಾಡತಕ್ಕದ್ದು. ಗ್ರಾಮದಿಂದ ಕೊಡಲ್ಪಡಬೇಕಾದ ಪೋಟ್ಟು ಮೊಬಲಗನ್ನು ಗ್ರಾಮದ ಪ್ರತಿ ಮನುಷ್ಯನೂ ಹಂಚಿಕೊಳ್ಳಬೇಕಾದ್ದು ಅವರು ಪರಸ್ಪರ ಮಾಡಿಕೊಂಡ ಸ್ವಂತಕರಾರಾಗಿರುತ್ತೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

4. ಅಮಲ್ದಾರರು ಅಂತಾ ಪಟ್ಟಿಗಳನ್ನು ತನಿಖೀ ಮಾಡಿ ಅದರಲ್ಲಿ ನಮೂದಿಸಿರುವ ಯೇರ್ಪಾಡುಗಳು ತೃಪ್ತಿಕರವಾಗಿದೆಯೇ ಯೆಂದು ಗ್ರಾಮಸ್ಥರನ್ನು ಕೇಳತಕ್ಕದ್ದು. ಯಾವನ ಹೆಸರಿಗೆ ಮೊಬಲಗು ದಾಖಲ್ಮಾಡಲ್ಪಟ್ಟಿರುತ್ತದೆಯೋ ಅಂತಾ ಪ್ರತಿ ಮನುಷ್ಯನನ್ನು ಬದಸ್ತೂರ್ ಕೇಳತಕ್ಕದ್ದು. ಅಂತಾ ವಿಚಾರಣೆಯಲ್ಲಿ, ಸದರೀ ಯೇರ್ಪಾಡು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಸಮ್ಮತವಾದದ್ದೆಂದು ಅಮಲ್ದಾರರಿಗೆ ತೃಪ್ತಿಕರವಾಗಿ ಕಂಡು ಬಂದರೆ ಸದರೀ ಅಂಶವನ್ನು ಪ್ರಸಕ್ತ ಪಟ್ಟೀಯಲ್ಲಿ ಸ್ವದಸ್ತೂರ್ ಬರೆದು ದಾಖಲೆಯ ಬಗ್ಗೆ ಶಾನಭೋಗನ ವಶವಲ್ಲಿಡತಕ್ಕದ್ದು. ತರುವಾಯ ಯಾವ ಮನುಷ್ಯನ ಹೆಸರಿಗಾಗಲಿ ಸದರೀ ಪಟ್ಟಿಗಳಲ್ಲಿ ದಾಖಲ್ಮಾಡಲ್ಪಟ್ಟಿರುವ ಮೊಬಲಗನ್ನು ಅವನಿಂದ ವಸೂಲ್ಮಾಡತಕ್ಕ ಬಾಕೀಯೆಂದು ಅವನ ಖಾತೆಯಲ್ಲಿ ದಾಖಲ್ಮಾಡಿ ಅದು ಜಮ್ಮಿ ಕಂದಾಯದಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಯಾವ ಗ್ರಾಮಸ್ಥರೇ ಆಗಲಿ ಸದರೀ ಗ್ರಾಮದೊಳು ಹಿಡುವಳಿಯಲ್ಲಿರದೇ ಯಿರುವ ಸರ್ತಿ ಜಮೀನಿನಲ್ಲಿ ಮೇಯಿಸುವ ಹಕ್ಕನ್ನು ಯೆರಡನೇ ಕಲಮಿನ ಪ್ರಕಾರ ಗೊತ್ತು ಮಾಡಲ್ಪಟ್ಟ ಮೊಬಲಗಿಗೆ ಅಂಗೀಕರಿಸುವದಕ್ಕೆ ಅಸಮಾಧಾನ ಪಟ್ಟಾಗ್ಯೂ, ಅಥವಾ ಈ ಮೊಬಲಗಿನ ವಿಭಾಗ ವಿಷಯದಲ್ಲಿ ಅವರು ಪರಸ್ಪರ ಸಮ್ಮತಿಸದೇ ಹೋದರೂ, ಅಥವಾ ಅಮಲ್ದಾರರ ವಿಚಾರಣೆಯಲ್ಲಿ ಅಂತಾ ಮೊಬಲಗಿನ ವಿಷಯವನ್ನು ಕುರಿತಾಗಲಿ, ಅದರ ವಿಭಾಗವನ್ನು ಕುರಿತಾಗಲಿ, ತಕರಾರ್ ಹುಟ್ಟಿದರೂ ಆಗ ಗ್ರಾಮಕ್ಕೆ ಸಂಬಂಧಪಟ್ಟ ಮೇಯಿಸುವ ಹಕ್ಕುದಾರಿಯು ಆಸ್ಥಳದಲ್ಲಿ ಮಾಮೂಲ್‌ನಂತೆಯೇ ಹರಾಜ್ ಮಾಡಲ್ಪಡತಕ್ಕದ್ದು.

6. ಮೇಲೆಕಂಡ ಕರಾರ್‌ಗಳ ಪ್ರಕಾರ ಮೇಯಿಸುವ ಹಕ್ಕು ಗ್ರಾಮಸ್ಥರಿಗೆ ಕೊಡಲ್ಪಟ್ಟಿರೆ ಅಂತಾ ಗ್ರಾಮಗಳೊಳಗಣ ಹಿಡುವಳೀಯಲ್ಲಿ ಯಿರದ ಸರ್ಕಾರ್ ಜಮ್ಮಿಗಳಲ್ಲಿ ಸದರೀ ಗ್ರಾಮದ ದನಗಳು ಮೇಯುವದಕ್ಕೆ ಯಾವ ನಿರ್ಬಂಧಗಳೂ ವುಂಟು ಮಾಡಲ್ಪಡಕೂಡದು.

0

7. ಪ್ರತಿ ಗ್ರಾಮದ ಹುಲ್ಲುಗಾವಲನ್ನು ಮೇಲೆ ವಿಧಿಸಲ್ಪಟ್ಟಂತೆ ವಿಲೇವಾರಿಮಾಡುವದಕ್ಕೆ ಬದಲಾಗಿ ಅಮಲ್ದಾರರು ತಮಗೆ ಆವಶ್ಯಕ ತೋರಿ ಬಂದಾಗ ಗ್ರಾಮಗಳನ್ನು ಅನುಕೂಲವಾದ ಗುಂಪುಗಳಾಗಿ ಮಾಡಿ ಅಂತಾ ಪ್ರತಿ ಗುಂಪಿನ ಮೇಯಿಸುವ ಹಕ್ಕನ್ನು ಪ್ರತ್ಯೇಕವಾಗಿ ವಿಲೇ ಮಾಡಬಹುದು. ಹಾಗೆ ಗುಂಪು ಮಾಡುವಂದರಲ್ಲಿ, ಹಾಲೀ ಜಾರೀಯಲ್ಲಿರುವ ಮೇಯಿಸುವ ಯೇರ್ಪಾಡುಗಳಿಗೆ ಪೂರಾನಿಗೇ ಕೊಡಪೇಕಲ್ಲದೆ ಸಾಧ್ಯವಾದ ಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರ ಸಮ್ಮತಿಯನ್ನು ಹೊಂದಿ ಯಿರತಕ್ಕದ್ದು.

ತಾರೀಖು 17ನೇ ಜುಲೈ 1884.

ನಂ. 80.—ಇದರಿಂದ ಪ್ರಕಟಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟ್ ಕಾರ್ಖಾನಹಳ್ಳಿ ತಾಲ್ಲೂಕಿನಲ್ಲಿ ಆಂದರೆ (ಬಸವನಪಟ್ಟ ಮತ್ತು ಬಿಲ್ಲಂದಾಡಿ ದೇಖೀಲ್) ಕಾವೇರಿ ಜಂಗ್ಲೀಗಳಲ್ಲಿ ಸ್ಲೀಪರ್‌ಗಳಿಗೋಸ್ಕರ ಕಡಿಯಲ್ಪಟ್ಟ ಸುಮಾರು 20615 ಘನ ಅಡಿಗಳುಳ್ಳ ಕಾಡು ಜಾತಿ ನಾಟಾಗಳು ಮತ್ತು ಮರಗಳು, ಕಾನಬಾನಹಳ್ಳಿ ತಾಲ್ಲೂಕು ಬೂವಳ್ಳಿ ಗ್ರಾಮದಲ್ಲಿ 1884ನೇ ಇಸವಿ ಸೆಪ್ಟಂಬರ್ 10ನೇ ಮುಕ್ತಮಿನೊಳು ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಸರ್ವೇಟರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ.

2. ಹರಾಜ್ ಷರತ್‌ಗಳು—ಮೈಸೂರು ಗೆಜೆಟ್ 1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರಿ ಇಸ್ತಿಹಾರಿ ನಾಮೆಯಲ್ಲಿ ಫಾಯಿಸ್ ಮಾಡಲ್ಪಟ್ಟ ಪ್ರಕಾರ ಇದ್ದು ಹರಾಜ್ ಕಾಲದಲ್ಲಿ ಓದಲ್ಪಡುವದು.

3. ಹರಾಜ್ ವಿಷಯಕವಾದ ಇತರ ಜಾಸ್ತೀ ತಪಸೀಲ್‌ಗಳನ್ನು ಡಿಸ್ಟ್ರಿಕ್ಟಿನ ಫಾರೆಸ್ಟ್ ಇಲಾಖೇಯಿಂದ ತಿಳಿದುಕೊಳ್ಳಬಹುದು.

ತಾರೀಖು 25ನೇ ಜುಲೈ 1884.

ನಂ. 87.—1879ನೇ ಇಸವಿ ಫಿಬ್ರವರೀ 18ನೇ ಮತ್ತು ಮಿನ ರೂಲ್ಸ್ ಅನುಸರಿಸಿ 1—2ನೇ ಕ್ಲಾಸ್ ಪ್ಲೀಡರುಗಳಿಗೆ ಯಿದರ ದೆಕೆಯಿಂದ ತಿಳಿಯಪಡಿಸುವದೇನಂದರೆ, (ಮೈಸೂರು ಲೀಗಲ್ ಪ್ರಾಕ್ಟಿಷನರ್ಸ್ ರೆಗ್ಯೂಲೇರ್ಷ) ಯಂಬ 1884ನೇ ಇಸವಿ IIIನೇ ನಂಬರ್ ರೆಗ್ಯೂಲೇಷನು ಅವರ ಸ್ಥಿತಿಯನ್ನು ಬಾಧಿಸುವದಿಲ್ಲ, ಮತ್ತು ಅವರು ಯಾವ ಕೋರ್ಟುಗಳಿಗೆ ದಾಖಲ್ಮಾಡಲ್ಪಟ್ಟಿರುತ್ತಾರೋ ಅಂಥಾ ಕೋರ್ಟುಗಳಲ್ಲಿ 1884ನೇ ಇಸವಿ ಡಿಸಂಬರ್ 31ನೇ ಮತ್ತು ಮಿನವರಿಗೆ ವಕಾಲತ್ತು ಮಾಡುವದಕ್ಕೆ ಅರ್ಹರಾಗಿರುತ್ತಾರೆ, ಅವರುಗಳು ಸದರೀ ತಾರೀಖಿನ ತರುವಾಯಲೂ ವಕಾಲತ್ತು ಮಾಡಲಿಚ್ಛೈಸಿದರೆ, ಸದರೀ ರೆಗ್ಯೂಲೇಷನಿನ 11ನೇ ಸೆಕ್ಷನ್ ಅನುಸರಿಸಿ ಚೀಫ್ ಕೋರ್ಟಿನಿಂದ ಬಂದು ಸರಟಿಫಿಕೇಟ್ ಪಡೆಯತಕ್ಕದ್ದು.

2. ಸದರೀ ರೆಗ್ಯೂಲೇಷನಿನ 10ನೇ ಸೆಕ್ಷನ್ ಅನುಸಾರವಾಗಿ ಏರ್ಪಾಟ್ಟಾಗುವ ರೂಲ್ಸಗಳಿಂದ ಚೀಫ್ ಕೋರ್ಟನವರು 1879ನೇ ಇಸವಿ ಫಿಬ್ರವರೀ 18ನೇ ಪುರ್ತು ಮಿನ ರೂಲ್ಸಗಳನುಸರಿಸಿ ದಾಖಲ್ಮಾಡಲ್ಪಟ್ಟ ಯಲ್ಲ ಮನುಷ್ಯರುಗಳಿಗೂ ಅಂಥಾ ಸರಟಿಫಿಕೇಟ್‌ಗಳನ್ನು ಕೊಡುವದಕ್ಕೆ ಶಕ್ತರಾಗಿರುವರು.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬವೋಜೀಬ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಟೇರಿ.